ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.730/2023**

**CW-8 PW-3**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಸವರಾಜ |
| ತಂದೆ/ಗಂಡ | ಃ | ಅಮರಪ್ಪ |
| ವಯಸ್ಸು | ಃ | 46 |
| ಉದ್ಯೋಗ | ಃ | ಹೆಚ್.ಸಿ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **20-09-2025** |

<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.</u>

ನಾನು 2021 ರಿಂದ ಇಲ್ಲಿವರೆಗೆ ಹೆಚ್.ಸಿ ಎಂದು ಗಬ್ಬೂರು ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 25.07.2023 ರಂದು ಸಂಜೆ 06.10 ಗಂಟೆಗೆ ನಾನು ಠಾಣ ಪ್ರಭಾರದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಮಧ್ಯ ದಾಳಿ ಪಂಚನಾಮೆ, ಜ್ಞಾಪನ ಪತ್ರವನ್ನುಮುಮಾಗಳ ಜೊತೆ ಹಾಜರು ಮಾಡಿದ್ದು ಅದರ ಆಧಾರದ ಮೇಲೆ ಠಾಣ ಗುನ್ನ ನಂ. 108/2023 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 31.07.2023 ರಂದು ಮಾದರಿ ಮಧ್ಯವನ್ನು ರಾಸಾಯನಿಕ ಪ್ರಯೋಗಾಲಯಕೆ ಪಿಸಿ-276 ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 27.08.2023 ರಂದು ರಾಸಾಯನಿಕ ಪರೀಕ್ಷ ವರದಿ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಜಪ್ತಿ ಮಾಡಿಕೊಂಡ ಉಳಿದ ಮಧ್ಯವನ್ನು ದಿನಾಂಕ 08.09.2023 ರಂದು ಅಬಕಾರಿ ಉಪ ನಿರೀಕ್ಷಕರು ಮಾನ್ವಿ ಇವರಿಗೆ ನೀಡಿರುತ್ತೇನೆ. ದಿನಾಂಕ 18.09.2023 ರಂದು ಆರೋಪಿ ನಿರೀಕ್ಷಣ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ಬಂದನದ ನಿಯಮಗಳನ್ನು ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 19.09.2023 ರಂದು ನ್ಯಾಯಾಲಯಕ್ಕೆ ಅಂತಿಮ ವರದಿ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗುರುತಿನ ಬಗ್ಗೆ ವಕೀಲರು ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು, ಪ್ರ.ವ ವರದಿಯನ್ನು ನಿಪಿ-3 ಎಂದು ಸಹಿಯನ್ನು ನಿಪಿ-3 ಎ ಎಂದು, ರಾಸಾಯನಿಕ ಪರೀಕ್ಷ

ವರದಿಯನ್ನು ನಿಪಿ-4 ಎಂದು ಸಹಿಯನ್ನು ನಿಪಿ-4 ಎ ಎಂದು, ಮಾನ್ವಿ ಅಬಕಾರಿ ಇವರಿಗೆ ಜಪ್ತಿ ಮಾಡಿದ ಮಧ್ಯವನ್ನು ಜಮಾ ಮಾಡಿಕೊಳ್ಳುವಂತೆ ಬರೆದ ಪತ್ರವನ್ನು ನಿಪಿ-5 ಎಂದು ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಎಸ್.ಪಿ ವಕೀಲರಿಂದ</u>

ನಾನು ತನಿಖಾ ಅವಧಿಯಲ್ಲಿ ಗುನ್ನೆ ಸ್ಥಳಕ್ಕೆ ಬೇಟಿ ನೀಡಿಲ್ಲ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಪಂಚರನ್ನು ಮತ್ತು ಸಿಬ್ಬಂದಿಗಳನ್ನು ಹೊರತು ಪಡಿಸಿ ಸ್ವತಂತ್ರ್ಯ ವ್ಯಕ್ತಿಗಳ ಹೇಳಿಕೆ ಪಡೆದಿಲ್ಲ. ಜಪ್ತಿ ಮಾಡಿದ ಮಧ್ಯದ ಪೌಚುಗಳಂತಹ ಮಧ್ಯ ಪರವಾನಿಗೆ ಪಡೆದ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ರಾಸಾಯನಿಕ ಪರೀಕ್ಷೆಗೆ ಕಳಿಸಿದ ಮಾದರಿ ಮಧ್ಯದ ಪೌಚನ್ನು ಪಿಎಸ್.ಐ ಇವರು ಪ್ರತ್ಯೇಕಾಗಿ ತಂದು ಕೊಟ್ಟಿದ್ದು ಅದನ್ನು ನಾನು ಕಳಳಿಸಿಕೊಟ್ಟಿರುತ್ತೇನೆ. ಪಿ.ಎಸ್.ಐ ಇವರು ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.